

# ಗಿನ್ನಿಸ್ ದಾಖಲೆಯತ್ತ ಹಿರಿಯಜ್ಜಿ

**ಈ** ಅಜ್ಜಿ ಅಂಟಿಸಾ ಕ್ವಿಚಾವಾ 19ನೇ ಶತಮಾನದಲ್ಲಿ ಹುಟ್ಟಿದವಳು. (ಜನ್ಮ ದಿನಾಂಕ 8-8-1880) ಜಾರ್ಜಿಯಾ ದೇಶದ ಪುಟ್ಟ ಹಳ್ಳಿ 'ಸಾಚಿನೊ' ಎಂಬಲ್ಲಿರುವ ಈಕೆ ಇಡೀ ಪ್ರಪಂಚದ ಹಿರಿಯಜ್ಜಿ. ಈಕೆ 1965ರಲ್ಲಿ ಅಂದರೆ ತನ್ನ 85ನೇ ವಯಸ್ಸಿನಲ್ಲಿ ಟೀ ಎಲೆ ಬಿಡಿಸುವ ಹಾಗೂ ಮುಸುಕಿನ ಜೋಳ ಕೀಳುವ ಕೆಲಸದಿಂದ ನಿವೃತ್ತಿ ಹೊಂದಿದ ಮೇಲೆ ತನ್ನ 40 ವರ್ಷದ ಮೊಮ್ಮಗನೊಂದಿಗೆ ನಿವೃತ್ತ ಜೀವನ ನಡೆಸುತ್ತಿದ್ದಾಳೆ.

ಶಾಲೆಗೆ ಹೋಗಿ ಜಾರ್ಜಿಯನ್ ಭಾಷೆಯನ್ನು ಕಲಿಯದಿದ್ದರೂ, ಈಕೆ ಸ್ಥಳೀಯ ಮಿಂಗ್ರೆಲಿನ್ ಭಾಷೆಯಲ್ಲಿ ಸ್ಪಷ್ಟವಾಗಿ ಮಾತನಾಡುತ್ತಾಳೆ. ಈಕೆಗೆ ಮೊದಲ ಮದುವೆಯಿಂದ ಜನಿಸಿದ ಮಕ್ಕಳಿಬ್ಬರೂ ಎರಡನೇ ವಿಶ್ವಯುದ್ಧದ ವೇಳೆ ಹಸಿವೆಯಿಂದ ತೀರಿಕೊಂಡರಂತೆ!

ಉಣ್ಣೆ ಬಟ್ಟೆಯ ಹೆಣಿಗೆ ಮಾಡುತ್ತಿದ್ದ ಕ್ವಿಚಾವಾಗೆ ಈಗಲೂ ಸ್ಮರಣ ಶಕ್ತಿ ತುಂಬಾ ಚೆನ್ನಾಗಿದೆ. ಈಕೆಗೆ 70 ವರ್ಷದ ಮಗ, 10 ಮೊಮ್ಮಕ್ಕಳು, 12 ಮರಿಮೊಮ್ಮಕ್ಕಳು ಹಾಗೂ 12 ಗಿರಿ ಮೊಮ್ಮಕ್ಕಳಿದ್ದಾರೆ! ಈಕೆಯ ಪಾಸ್‌ಪೋರ್ಟ್ ಆಧಾರದಿಂದ, ವಿಶ್ವಕ್ಕೆಲ್ಲಾ ಈಕೆಯೇ ಹಿರಿಯವಳು ಎಂದು ಗಿನ್ನಿಸ್ ಪುಸ್ತಕದಲ್ಲಿ ದಾಖಲು ಮಾಡಲು ಊರಿನವರೆಲ್ಲಾ ಪ್ರಯತ್ನಿಸುತ್ತಿದ್ದಾರೆ.

ಈಗಿನ ಗಿನ್ನೆಸ್ ದಾಖಲೆ ಪ್ರಕಾರ ಜಪಾನ್‌ನ 114 ವರ್ಷದ ಶತಾಯುಷಿ ಯೊಬ್ಬರು ವಿಶ್ವದ ಹಿರಿಯಜ್ಜಿ. ಆದರೆ ಕ್ವಿಚಾವಾ ಆಕೆಗಿಂತಲೂ ಹಿರಿಯಳು. ಕ್ವಿಚಾವಾ ಅಜ್ಜಿಯ 130ನೇ ಹುಟ್ಟುಹಬ್ಬವನ್ನು ಜುಲೈ 8ರಂದು ಮನೆಯ ಮುಂದಿನ ಹುಲ್ಲುಹಾಸಿನಲ್ಲಿ ಆಚರಿಸಲಾಯಿತು. ಜಾನಪದ ಹಾಡುಗಳನ್ನು ಕೇಳುತ್ತಾ, ಅತಿಥಿಗಳೆಲ್ಲಾ ಸಾಂಪ್ರದಾಯಿಕ ಮಿಂಗ್ರೆಲಿನ್ ಖಾದ್ಯಗಳೊಂದಿಗೆ, ಕಾರ್ನ್ ಪಾಯಸ ಹಾಗೂ ಚಿಕನ್ ಮಸಾಲಾವನ್ನು ಸವಿದರಂತೆ!

■ ವಿದ್ಯಾ ಹಾಲಭಾವಿ